ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3708/2022

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಚಿಕ್ಕತಾಯಮ್ಮಾ
ಗಂಡನ ಹೆಸರು :- ಹೇಮಗಿರಿಗೌಡ
ವಯಸ್ಸು :- 65 ವರ್ಷ
ಉದ್ಯೋಗ :- ಕೂಲಿ
ವಾಸ :- ಚಲಮಸಂದ್ರ

**ಸಾಕ್ಷಿಗೆ ದಿಃ 22.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಚಾಸಾ1 ನನ್ನ ಮಗ. ಚಾಸಾ 3 ನನ್ನ ಸೊಸೆ ಆಗಬೇಕು. ಆರೋಪಿತ ನನಗೆ ಗೊತ್ತು. 3 ವರ್ಷಗಳ ಹಿಂದೆ ನಾವು ಮನೆ ಕಟ್ಟುತ್ತಿದ್ದು ನಾವು ಮನೆಯ ಸುತ್ತ 2 – 3 ಅಡಿ ಜಾಗ ಬಿಟ್ಟು ಮನೆ ಕಟ್ಟಿರುತ್ತೇವೆ. ನಾವು ಕಟ್ಟಿರುವ ಮನೆಯನ್ನು ಆರೋಪಿ 2 ಅವರು ಕಿತ್ತು ಹಾಕಿ ಹೊಡೆಯಲು ಬಂದಿರುತ್ತಾರೆ. ಆಗ ಬೆಳಿಗ್ಗೆ 8 ಗಂಟೆ ಸಮಯ ಆಗಿತ್ತು. ಆ ಸಮಯದಲ್ಲಿ ನಾನು ಮತ್ತು ಚಾಸಾ 3 ಮನೆಯಲ್ಲಿದ್ದೇವು. ನಾವು ಆರೋಪಿತರಿಗೆ 3 ಅಡಿ ಪ್ಯಾಸೇಜ್ ಬಿಟ್ಟು ಕಟ್ಟುವಂತೆ ಹೇಳಿರುತ್ತೇವೆ. ಆಗ ಆರೋಪಿತರೂ ನಮಗೆ ಸೋಳೆ ಮುಂಡೆ, ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಆರೋಪಿ 2 ಅವರ ತಮ್ಮಂದಿರು ಅವರ ಮಕ್ಕಳು ಮತ್ತು ಹೆಂಡತಿ ಹಾಗೂ ಮಗಳನ್ನು ಕರೆಯಿಸಿ ಹೊಡೆದಿರುತ್ತಾರೆ. ಆರೋಪಿರೆಲ್ಲರೂ ಅವರು ನನ್ನನ್ನು ಹಿಡಿದು ಎಳೆದಾಡಿದ್ದು ನಂತರ ಆರೋಪಿ 2 ದೊಣ್ಣೆಯಿಂದ ನನ್ನ ಭುಜಕ್ಕೆ ಹೊಡೆದಿರುತ್ತಾರೆ. ನನಗೆ ಪ್ರಜ್ಞೆ ತಪ್ಪಿರುತ್ತದೆ. ನಂತರ ಚಾಸಾ 3 ಅವರು ನನ್ನ ಮಗನಿಗೆ ಕರೆ ಮಾಡಿದ್ದು ನಂತರ ನನ್ನನ್ನು ಹು.ದುರ್ಗ ಸರ್ಕಾರಿ ಆಸ್ಪತ್ರಗೆ ಅಂಬ್ಯೂಲೇಸ್ಸನಲ್ಲಿ

ಕರೆದುಕೊಂಡು ಹೋಗಿದ್ದು ನಂತರ ಮದ್ದೂರು ಆಸ್ಪತ್ರಗೆ ಕರೆದುಕೊಂಡಿರುವುದಾಗಿ ನನಗೆ ಗೊತ್ತಾಗಿರುತ್ತದೆ. ನನಗೆ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆ. ಸದರಿ ವಿಚಾರವನ್ನು ಪೋಲಿಸರ ಮುಂದೆ ಹೇಳಿರುತ್ತೇನೆ. ಸ್ಥಳ ಪಂಚನಾಮೆಗೆ ನನ್ನ ಹೆಬ್ಬಟ್ಟಿನ ಗುರುತು ಇರುತ್ತದೆ ಅದನ್ನು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ಪಂಚನಾಮೆಗೆ ಬೇರೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ನಿ.ಪಿ 2 ಎಂದು ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಚಾಸಾ 6 ಮತ್ತು 7 ಸಹ ಇದ್ದು ಪಂಚನಾಮೆಯನ್ನು 2 ರಿಂದ 3-4 ಗಂಟೆಯವರೆಗೆ ಮಾಡಿರುತ್ತಾರೆ. ಪೊಲಿಸರು ದೊಣ್ಣೆಯನ್ನು ತೆಗೆದುಕೊಂಡು ಹೋಗಿರುತ್ತಾರೆ. ದೊಣ್ಣೆಯನ್ನು ನಾನು ನೋಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ನಾವು ಈ ಕೇಸ ದಾಖಲು ಮಾಡಲು 2 ವರ್ಷಗಳ ಹಿಂದೆ ಮನೆಯನ್ನು ಪ್ಯಾಸೇಜ್ ಜಾಗವನ್ನು ಬಿಟ್ಟು ಕಟ್ಟಿರುತ್ತೇವೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿ ಆರೋಪಿ 2 ಅವರ ಮನೆ ಇದ್ದು ಅವರು ಮನೆ ರೀಪೇರಿ ಮಾಡಲು ನಮ್ಮ ಮನೆಯ ಪ್ಯಾಸೇಜ್ ಅನ್ನು ಉಪಯೋಗಿಸುತ್ತಿದ್ದರು ಎಂದರೆ ಸರಿ. ದಿಃ17.02.2022 ರಂದು ನಾನು ಮತ್ತು ನನ್ನ ಮಗ ನಾವು ಮನೆ ಕಟ್ಟುವಾಗ ಪ್ಯಾಸೇಜ್ ಜಾಗ ಬಿಟ್ಟು ಮನೆ ಕಟ್ಟಿದ್ದೇವೆ ನೀವು ಸಹ ಪ್ಯಾಸೇಜ್ ಜಾಗ ಬಿಟ್ಟು ಮನೆ ಕಟ್ಟಿ ಎಂದಿದ್ದಕ್ಕೆ ಅವರು ಗಲಾಟೆ ಮಾಡಿ ದೂರು ಕೊಡಲು ಹೋಗಿರುತ್ತಾರೆ ಎಂದರೆ ಸರಿ. ದಿಃ 18.02.2022 ರಲ್ಲಿ ನಾನು ಮತ್ತು ಚಾಸಾ 3 ಮನೆಯಲ್ಲಿದ್ದೇವು ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರೆಲ್ಲರೂ ಆರೋಪಿ 2 ಅವರು ಮನೆಯ ಹತ್ತಿರ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

ಆಗ ನಾನು ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ನಿಂತು ಕೊಂಡು ಪ್ಯಾಸೇಜ್ ಜಾಗದ ವಿಚಾರವಾಗಿ ಕೇಳುತ್ತಿದ್ದಾಗ ಆರೋಪಿತರು ಅಲ್ಲಿಗೆ ಬಂದು ನೀನು ಯಾರೇ ನಮ್ಮನ್ನು

ಕೇಳಲು ಬೋಳಿ ಮುಂದೆ,ಸೋಳೆ ಮುಂದೆ ಎಂದು ಬೈದು ಎಲ್ಲರೂ ನನ್ನದು ಹಿಡಿದು ಎಳೆದಾಡಿ ಕೈಗಳಿಂದ ಮೈಗೆ ಹೊಡೆದು ಕಾಲಿನಿಂದ ತುಳಿದಿರುತ್ತಾರೆ ಎಂದರೆ ಸರಿ. ಆರೋಪಿ 2 ನನ್ನ ತಲೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರೆಲ್ಲರೂ ನಿನ್ನನ್ನು ಕೊಲೆ ಮಾಡಿ ಹೋಗುತ್ತೇವೆಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆಗ ನಮ್ಮ ಮನೆಯ ಹತ್ತಿರ ಚಾಸಾ 3, 4 ಮತ್ತು 5 ಬಂದು ಜಗಳ ಬಿಡಿಸಿರುತ್ತಾರೆಂದು ನಾನು ತಿಳಿದುಕೊಂಡಿರುತ್ತೇನೆ. ಈ ಗಲಾಟೆಯಲ್ಲಿ ನನಗೆ ತಲೆಯಲ್ಲಿ ಊತ ಬಂದು ಗಾಯವಾಗಿದ್ದು ಎಡತೋಳಿನಲ್ಲಿ ರಕ್ತಹೆಪ್ಪು ಗಟ್ಟಿ ಕಪ್ಪು ಮತ್ತು ಹಸಿರು ಬಣ್ಣಕ್ಕೆ ತಿರುಗಿದ್ದು ಎಡಕುಂಡಿಯ ರಕ್ತ ಹೆಪ್ಪು ಗಟ್ಟೆ ನೋವಾಗಿದ್ದು ಹಿಂಬದಿ ಸೊಂಟದಲ್ಲಿ ಊತ ಬಂದು ನೋವಾಗಿರುತ್ತದೆ ಎಂದರೆ ಸರಿ. ಈ ವಿಚಾರವಾಗಿ ದಿಃ 04.03.2022 ರಂದು ಚಾಸಾ 1 ಅವರು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಅದೇ ದಿನ ಪೋಲಿಸರು 3.30 ರಿಂದ 4.30 ರ ಸಮಯದಲ್ಲಿ ಬಂದು ಸ್ಥಳಕ್ಕೆ ಬಂದು ಮಹಜರ ಮಾಡಿರುತ್ತಾರೆ ಎಂದರೆ ಸಾಕ್ಷಿ ಪೋಲಿಸರು ಸ್ಥಳಕ್ಕೆ ಬರುತ್ತೇನೆಂದು ಹೇಳಿ ಬಂದಿರಲಿಲ್ಲವೆಂದು ಹೇಳುತ್ತಾರೆ.

**ಆರೋಪಿಪರ ಪಾಟೀ ಸವಾಲುಃ ವಾಯ್. ಹೆಚ್ ಆರ್ಃ ವಕೀಲರಿಂದ**

ನಮ್ಮ ಮನೆ ಖಾತೆ ನಂ. ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆಗೊತ್ತಿಲ್ಲ. ಆರೋಪಿ 2 ಕಟ್ಟಿತ್ತಿರುವ ಮನೆ ನನ್ನ ತಾತನ ಹೆಸರಿಗೆ ಇದ್ದು ಅದರ ಖಾತೆ ನಂ. ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆಗೊತ್ತಿಲ್ಲ. ಸಾಕ್ಷಿ ನಾನು ಓದಿಲ್ಲ ಗೊತ್ತಿಲ್ಲವೆಂದು ಹೇಳುತ್ತಾರೆ. ಸುಮಾರು ವರ್ಷಗಳಿಂದ ಸದರಿ ಜಾಗದ ವಿಚಾರವಾಗಿ ಸಿವಿಲ್ ವ್ಯಾಜ್ಯ ಇತ್ತು ಎಂದರೆ ಸರಿ. ಸಿವಿಲ್ ವ್ಯಾಜ್ಯ ಮುಗಿದ ಬಳಿಕ ಅವರ ಜಾಗದಲ್ಲಿ ಅವರು ಮತ್ತು ನಮ್ಮ ಜಾಗದಲ್ಲಿ ನಾವು ಮುಂದುವರೆದುಕೊಂಡು ಬಂದಿರುತ್ತೇವೆ ಎಂದರೆ ಸರಿ.ಆರೋಪಿತರ ಅವರ ಜಾಗದಲ್ಲಿ ಮನೆ ಕಟ್ಟುತ್ತಿರುವಾಗ ನಾವು ತೊಂದರೆ ಕೊಟ್ಟಿದ್ದಕ್ಕಾಗಿ ಅವರು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮಗ ಮತ್ತು ಸೊಸೆ ನ್ಯಾಯಾಲಯಕ್ಕೆ

ಹಾಜರಾಗುತ್ತಿದ್ದಾರೆ ಎಂದರೆ ಸರಿ. ಯಾವುದಾದರೂ ಗಲಾಟೆ ಆದರೆ ದೂರನ್ನು ನೀಡಬೇಕೆಂಬ ವಿಚಾರ ಚಾಸಾ 2 ಅವರಿಗೆ ಗೊತ್ತು ಎಂದರೆ ಸರಿ. ಯಾವುದೇ ಗಲಾಟೆ ಆಗದೇ ಇರದೇ ಕಾರಣ ಚಾಸಾ 3 ಯಾವುದೇ ದೂರನ್ನು ನೀಡಲ್ಲವೆಂದರೆ ಸಾಕ್ಷಿ ನಾನು ಮತ್ತು ನನ್ನ ಸೊಸೆ ಯಾವುದೇ ಗಲಾಟೆ ಮಾಡಿಕೊಂಡಿಲ್ಲವೆಂದು ಹೇಳುತ್ತಾರೆ.

ಗಲಾಟೆ ಆದ ದಿನ ಪೋಲಿಸರು ಸ್ಥಳಕ್ಕೆ ಬಂದಿದ್ದರು. ಗಲಾಟೆ ಆದ ಸಮಯದಲ್ಲಿ ಚಾಸಾ 1 ಜಮೀನಿನ ಹತ್ತಿರ ಇದ್ದರು. ಗಲಾಟೆ ಆದ ಜಾಗದ ಸುತ್ತಮುತ್ತ ಸುಮಾರು ಮನೆಗಳು ಇದ್ದು ಅವರು ಯಾರು ಹೇಳಿಕೆ ನೀಡಿರುವುದಿಲ್ಲ. ಯಾವುದೇ ಗಲಾಟೆ ಆಗದೆ ಇರುವ ಕಾರಣ ಅಕ್ಕಪಕ್ಕದ ಮನೆಯವರು ಹೇಳಿಕೆ ನೀಡಿಲ್ಲವೆಂದರೆ ಸರಿಯಲ್ಲ. ಗಲಾಟೆ ಆದ ದಿನ ನನ್ನ ಮಗ ಎಷ್ಟು ಗಂಟೆಗೆ ಬಂದಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಗಲಾಟೆ ಆದ ಸಮಯದಲ್ಲಿ ನಿಮ್ಮ ಜೊತೆ ಯಾರು ಇರಲಿಲ್ಲವೆಂದರೆ ಸಾಕ್ಷಿ ನನ್ನ ಸೊಸೆ ಇದ್ದರು ಎಂದು ಹೇಳುತ್ತಾರೆ. ದೂರಿನಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಘಟನೆ ಬಗ್ಗೆ ಚಾಸಾ 1 ಅವರಿಗೆ ಏನು ಹೇಳಿರುವುದಿಲ್ಲ.

ಮಹಜರನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರ ಠಾಣೆಗೆ ಸಹಿ ಮಾಡಲು ನಾನು ಮತ್ತು ನನ್ನ ಮಗ ಹೋಗಿರುತ್ತೇವೆ. ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಪೋಲಿಸರಿಗೆ ಯಾರು ಎಲ್ಲಿಂದ ತಂದು ನೀಡಿರುತ್ತಾರೆ ಎಂದರೆ ಸಾಕ್ಷಿ ನನ್ನ ಸೊಸೆ ಮನೆಯಿಂದ ತಂದು ಕೊಟ್ಟಿರುತ್ತಾರೆಂದು ಹೇಳುತ್ತಾರೆ. ಗಲಾಟೆ ಆದ ದಿನವೇ ನಾನು ಆರೋಪಿ 2 ಅವರು ಮೇಲೆ ಮತ್ತು ಇತರರ ಮೇಲೆ ದೂರನ್ನು ಕೊಡಲು ತೊಂದರೆ ಇರಲಿಲ್ಲ. ನಾನು ಹೇಳಿದಂತೆ ಯಾವುದೇ ಗಲಾಟೆ ಆಗಿಲ್ಲ ಪಂಚಾಯಿತಿಯಲ್ಲಿ ಹೇಳಿದಂತೆ ಯಾರು ತಿರ್ಮಾನ ಮಾಡಿಕೊಳ್ಳದೇ ಇರುವ ಕಾರಣ ಆರೋಪಿತರು ದೂರನ್ನು ನೀಡಿದ್ದು ನಾವು ಸಹ 1 ವಾರದ ಬಳಿಕ ಅವರು ದೂರು ನೀಡಿದ್ದಾರೆಂದು ಗೊತ್ತಾದ ಬಳಿಕ ನಾವು ದೂರು ನೀಡಿರುತ್ತೇವೆ ಎಂದರೆ ಸಾಕ್ಷಿ ತಿರ್ಮಾನ ಮಾಡಿಕೊಳ್ಳಲು ಹೋಗುವಷ್ಟರಲ್ಲಿ ಗಲಾಟೆ

ಆಗಿರುತ್ತದೆಂದು ಹೇಳುತ್ತಾರೆ. ಮಹಜರಗೆ ಸಹಿ ಮಾಡುವ ದಿನ ಮಾತ್ರ ಪೋಲಿಸ ಠಾಣೆಗೆ ಹೋಗಿದ್ದು ಬೇರೆ ದಿನ ಹೋಗಿರುವುದಿಲ್ಲ. ನಾನು ವೈದ್ಯರಿಗೆ ನನ್ನ ಮೇಲೆ ಯಾರು ಹಲ್ಲೆ ಮಾಡಿರುತ್ತಾರೆಂದು ಹೇಳಿ ಬರೆಸಿರುತ್ತೇನೆ. ಪೋಲಿಸರು ಸಹಿ ಮಾಡಲು ಹೇಳಿದ್ದು ನಾನು ಸಹಿ ಮಾಡಿರುವುದನ್ನು ಹೊರತು ಪಡಿಸಿ ಹೇಳಿಕೆಯಲ್ಲಿ ಏನು ಬರೆದಿದ್ದಾರೆಂದು ನನಗೆಗೊತ್ತಿಲ್ಲ. ಆರೋಪಿತರಿಗೆ ನಾವು ಹೊಡೆದಿದ್ದೆವೆಂದು ಅವರು ದೂರನ್ನು ನೀಡಿದ್ದು ಅದನ್ನು ನನ್ನ ಮಗ ಹೇಳಿದ್ದು ನಂತರ ನಾವು ಸಹ ದೂರನ್ನು ನೀಡಿ ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ನಾನು ಹೇಳಿದ ದಿನಾಂಕಕ್ಕೆ ಗಲಾಟೆ ಮಾಡಿಲ್ಲ ಅವಾಚ್ಯ ಶಬ್ದಗಳಿಂದ ಬೈದಿಲ್ಲ ನನ್ನ ಮೇಲೆ ಹಲ್ಲೆ ಮಾಡಿಲ್ಲ ಆದ ಕಾರಣ ನಾನು ಪೋಲಿಸರಿಗೆ ಮತ್ತು ಚಾಸಾ 1 ಅವರಿಗೆ ಹೇಳಿಲ್ಲವೆಂದರೆ ಸರಿಯಲ್ಲ. ಆರೋಪಿತರೂ ಮತ್ತು ನಮ್ಮ ನಡುವೆ ಹಿಂದಿನಿಂದ ದ್ವೇಷ ಇದ್ದ ಕಾರಣ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗ ಹೇಳಿದಂತೆ ನಾನು ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.